


ಹೇಳತೀನಿ ಕೇಳ್ರಿ' ಅಂತ ಚಾಟಿನ ಮೇಲೆ ಕೈಯಿಟ್ಟ. ಚಾಟ್ ಗಾಳಿಗೆ ಬಂಡೆಯಿಂದ ಮೇಲೆ ಹಾರುವದನ್ನು ನೋಡಿ ಜ್ವಾಳದ ರಾಶಿ ಒಣಗು ಹಾಕಿದಾಗ ತಾಡಪಾಲಿನ ನಾಲ್ಕು ಮೂಲೆಗೆ ಕಲ್ಲಿಟ್ಟಂತೆ ಇಲ್ಲಿ ಓಸಿಯ ಎಂಬ ದೊಡ್ಡ ರಾಶಿಯ ತಾಡುಪಾಲಿಗೆ ನಾಲ್ಕು ಮೂಲೆಯಲ್ಲಿ ಕಲ್ಲಿಟ್ಟರು. ಎಲ್ಲರೂ ನಿಧಿ ಸಿಗತ್ತದೇನೋ ಎಂಬುವಂತೆ ತಮ್ಮ ಬೆರುಗುಗಣ್ಣುಗಳನ್ನು ರೆಪ್ಪೆ ಬಡಿಯದೇ ಚಾಟಿನ ಮೇಲೆ ದಿಟ್ಟಿಸಿದ್ದರು. ಗೋವಿಂದರಾಜ, 'ಶುಕ್ರವಾರ ನೋಡ್ರಿ ಏನು ಬಂದಾದ 34 ಅದರ ಮೇಲೆ 52 ಐತಿ. ಅಲ್ಲೇಲಿಂದ ಹತ್ತು ಲೈನ್ ಗುರುವಾರದ ಬಜಾರಕ್ಕ ಎಣಿಸಿ ನೋಡ್ರಿ 25 ಬಂದೈತಿ. ಯಂಗ ಬಂತದ್ರ 34ಕ್ಕ ಡಿಫ್ರೆನ್ಸ್‌ಗೆ ಒಂದು ಹೆಚ್ಚು ಓಪನ್ ಆಗ್ಯದ, ಕ್ಲೋಸ್‌ಗೆ ಒಂದು ಹೆಚ್ಚು ಕ್ಲೋಸ್ ಆಗ್ಯದ. ಅದರ ಮ್ಯಾಗಳ ಸಂಖ್ಯಿ 52ರ ಪಲ್ಟಿ 25 ಬಂದೈತಿ. ಮತ್ತೆ ಗುರುವಾರದ 25ರ ಕೆಳಗ ಕೆಳಗ ಹತ್ತು ಲೈನ್ ಎಣಿಸಿದ್ರ 46 ಐತಿ. ಇದು 25ಕ್ಕ ಡಿಫ್ರನ್ಸ್‌ಗೆ ಒಂದು ಹೆಚ್ಚು ಓಪನ್ ಆಗಿ, ಕ್ಲೋಸ್‌ಗೆ ಒಂದು ಹೆಚ್ಚು ಕ್ಲೋಸ್ ಆಗ್ಯದ. ಅದರ ಮ್ಯಾಗಳ ಸಂಖ್ಯಿ 64ರ ಪಲ್ಟಿ 46 ಬುಧವಾರ ಬಂದೈತಿ. ಅದರ ಪ್ರಕಾರ ಇವತ್ತು ಮಂಗಳವಾರ ಏನು ಬರುತ್ತಂದ್ರ, 46ರಿಂದ ಇವತ್ತಿಗೆ ಅಂದರೆ ಮಂಗಳವಾರದ ಬಜಾರಕ್ಕ ಹತ್ತು ಲೈನ್ ಎಣಿಸಿದ್ರ, ಡಿಫ್ರೆನ್ಸ್‌ಗೆ ಒಂದು ಹೆಚ್ಚು ಓಪನ್ ಆಗಿ, ಕ್ಲೋಸ್‌ಗೆ ಒಂದು ಹೆಚ್ಚು ಕ್ಲೋಸ್ ಆಗಿ. ಅದರ ಮ್ಯಾಗಳ ಸಂಖ್ಯಿ 73ರ ಪಲ್ಟಿ ಆಗಬೇಕಂದ್ರ ಒಂದೇ ಸಂಖ್ಯೆ 37 ಸಾಕಾಗೋಟು ಆಡಿಕೆಂಡುಬಿಡ್ರಿ' ಅಂದು ಗೋವಿಂದರಾಜ ಇಲ್ಲಿಯವರೆಗೆ ಗಟ್ಟಿಗೆ ಅದುಮಿಟ್ಟುಕೊಂಡಿದ್ದ ಉಸಿರನ್ನು ಒಮ್ಮೆಲೇ ಬುಸ್... ಅಂತ ಬಿಟ್ಟ. ಅವಳೆಪ್ಪ ಆವಾಗ ತೆಗದ ಬಾಯಿ ಇವಾಗ ಮುಚ್ಚಿಗೆಂಡ. ಗೋವಿಂದರಾಜ ರೂಟು ಹೇಳೋದು, 'ನೋಡಿ ಕಮಲಿ ಮಗಳು ವಿಮಲಿ' , 'ವಿಮಲಿ ಮಗಳು ಕಮಲಿ' ಅಂದಂಗ ಆಯ್ತು. 'ಆಡಿಬುಡ್ರಿ ದಗದಕ್ಕೋಗಿ ನಿಮ್ಮ ನಿಮ್ಮ ಹೆಣ್ಣಮಕ್ಕಳು ಮನಿಗಿ ಬರೋಹೊತ್ತಾತಿ 37ಕ್ಕ ಬರಿಸಿ ಮನೆ ಸೇರಿಕೆಂಡುಬುಡ್ರಿ' ಅಂತ ಮತ್ತೊಂದು ಬಾರಿ ಗೋವಿಂದರಾಜ ರಾಗ ಮಾಡಿ ಹೇಳಿದ. ಅದರ ತಳಬುಡ ಪೂರ್ತಿ ಅರ್ಥ ಆಗಲಾರದ ಅವಳೆಪ್ಪ ಪೂರ್ತಿ ಮನೆಮುಚ್ಚೊ ಆಟಪ್ಪೋ... ಇದು ಅಂದ. ಒಂದು ಓಟಿ ಬಾಟಲಿ ಗೋವಿಂದರಾಜಗ ಕೊಡಿಸಿ ಎಲ್ಲರೂ ತಮ್ಮ ತಮ್ಮ ಮನೆ ಕಡೆ ಕುಂಡೆ ಜಾಡಿಸಿ ಎದ್ದುಹೋದರು.

* * *